ಮಗಾ ವಸಿ ಬಿರ್ನೆ' ಅಂದ್ಲು. 'ಈ ಅಜ್ಜಿಗೆ ಒಂದ್ ನಿಮ್ಷ ವೇಯ್ಟ್ ಮಾಡೋ ಪೇಶನ್ಸೇ ಇಲ್ಲ' ಅಂತ ಗೊಣಗುತ್ತಾ ಬಂದ ಹತ್ತು ವರ್ಷದ ಸೋನು ಅವಳ ಫೋನ್ ತಗಂಡು ನಂಬರ್ ಡಯಲ್ ಮಾಡಿ ಕೊಟ್ಟವನೇ ಅದೇನೋ ಮಿಂಚಿಹೋಗುತ್ತದೆ ಅನ್ನೋತರ ಮತ್ತೆ ರೂಮೊಳಕ್ಕೆ ಸೇರ್ಕಂಡ.

ಬಯಲು ಸೀಮೆಯ ಹೆಂಗಸರಿಗಿರುವ ಎಲ್ಲಾ ಗುಣಗಳನ್ನು ಹೊತ್ತುಕೊಂಡೇ ಹುಟ್ಟಿದ್ದಳು ಗಂಗಮಾಳಕ್ಕ. ಕಪ್ಪಗಿದ್ದರೂ ಲಕ್ಷಣವಾದ ಎತ್ತರದ ಗಟ್ಟಿಮುಟ್ಟಾದ ಹೆಣ್ಣು. ಮನೆಯ ಏಳು ಹೆಣ್ಣುಮಕ್ಕಳ ನಡುವೆ ಇತ್ತ ಹಿರಿಯಳೂ ಅಲ್ಲದೆ ಅತ್ತ ಕಿರಿಯಳೂ ಆಗದೆ ಐದನೆಯವಳಾಗಿ ಬೆಳೆದ ದಿಡಗ ಭಾಗದ ಚಿಕ್ಕ ಹಳ್ಳಿಯ ಮುಗ್ಧೆ. ಅವಳ ಅಪ್ಪ ಇದ್ದಕ್ಕಿದ್ದಂತೆ ಒಳ್ಳೆಯ ಸಂಬಂಧವೊಂದು ಒದಗಿಬಂತೆಂದು ಚಿಕ್ಕವಯಸ್ಸಿನ ಇವಳನ್ನ ದೂರದ ತಿಪಟೂರಿನ ಬಳಿಯ ಊರೊಂದರ ಪಟೇಲರ ಮಗನಿಗೆ ಮದುವೆ ಮಾಡಿ ಕೊಟ್ಟಿದ್ದರು. 'ಗಂಡಿಗೆ ವಯಸ್ಸಾಗದೆ, ಕರ‍್ರಗೆ ಒಣಗಿದ ಕಡ್ಡಿಯಂಗವನೆ ನನಗೆ ಬೇಡ' ಎಂದ ಇವಳ ಮಾತು ಅಡುಗೆ ಕೋಣೆಯ ಒಸಲು ದಾಟಿ ಆಚೆಗೆ ಬರಲೇ ಇಲ್ಲ. ತನ್ನ ನಿರಾಕರಣೆಯನ್ನ ತೋರಿಸಲು ಅಡುಗೆ ಕೋಣೆಗೆ ಹೋಗಿ ಒಲೆಯ ಕೆಂಡಕ್ಕೆ ಒಂದಿಡಿ ಒಣಮೆಣಸಿನ ಕಾಯನ್ನ ಎಸೆದು ಘಾಟು ಏಳುವಂತೆ ಮಾಡಿದ್ದಳಂತೆ. ಆದರೂ ಆ ಮದುವೆ ನಡೆಯುವುದು ತಪ್ಪಿರಲಿಲ್ಲ.

ತವರಿನಲ್ಲಿ ತಿಪ್ಪೆ ಮೇಲಿನ ಕುಂಬಳ ಬಳ್ಳಿಯಂತೆ ಸುಮ್ಮನೆ ತನ್ನಪಾಡಿಗೆ ತಾನು ಬೆಳೆದ ಗಂಗಮಾಳಕ್ಕ ಬಂದು ಸೇರಿದ್ದು ಬೇರೆಯದೇ ಒಂದು ಪ್ರಪಂಚಕ್ಕಾಗಿತ್ತು. ತನಗೆ ಇದುವರೆಗೆ ಗೊತ್ತೇಯಿಲ್ಲದ ಬೇರೆಯದೇ ಸಂಪ್ರದಾಯ ರೂಢಿಸಿಕೊಂಡ, ಶಿಕ್ಷಿತರೇ ತುಂಬಿದ, ಪೇಪರ‍್ರು, ಪುಸ್ತಕ ಓದುವ, ಧ್ಯಾನ ಪೂಜೆ ಮಾಡುವ, ದುಡ್ಡಿಗೆ ಲೆಕ್ಕವೇ ಇಲ್ಲದ ಪಟೇಲರ ಮನೆಗೆ ಮನಸ್ಸಿಲ್ಲದ ಮನಸ್ಸಿನಿಂದ ಬಂದಾಗ ನಿಜಕ್ಕೂ ಅವಳಿಗೆ ಕಕರು ಮಕರು ಹಿಡಿದಂತಾಗಿತ್ತು. ಮೂಗಿನ ಗೊಣ್ಣೆಯನ್ನೂ ನೆಟ್ಟಗೆ ತೆಗೆದುಕೊಳ್ಳಲು ಬರುತ್ತಿರಲಿಲ್ಲ ಇವಳಿಗೆ. ಇಲ್ಲಿ ನೋಡಿದರೆ ಅತ್ತೆ ಬಲೂ ಮಡಿ ಹೆಂಗಸು. ಹಾಸನದ ಬಳಿ ಇದ್ದ ಶಾಂತಿಗ್ರಾಮದ ಹೆಣ್ಣುಮಗಳು, ಅವಳ ತಂದೆಯ ಮನೆ ಬ್ರಾಹ್ಮಣರ ಕೇರಿಗೆ ತಾಕಿದಂತೆಯೇ ಇತ್ತಂತೆ, ಹಾಗಾಗಿ ಅಲ್ಲಿನ ಹೆಂಗಸರ ಅಷ್ಟೂ ಗುಣಗಳನ್ನು ಕಲಿತಿದ್ದಳು, ಅದನ್ನೇ ಬಹಳ ಹೆಮ್ಮೆಯಿಂದ ಈ ಊರಿನಲ್ಲಿಯೂ ಆಚರಿಸುತ್ತಿದ್ದಳು. ಅಂತಹ ಅತ್ತೆ ಇವಳಿಗೆ ನೀರು ಸೇದಲು ಹೋದರೆ ಸೇದುವ ಬಾವಿಯ ಕಟ್ಟೆಯನ್ನೂ ತೊಳೆದು, ಹಗ್ಗವನ್ನೂ ತೊಳೆದು ನೀರು ತಗಂಬಾ ಅನ್ನುತ್ತಾಳೆ!

ಗಂಗಮಾಳಿಗೆ ಆ ಮನೆಯವರು ದಿನಾ ಸ್ನಾನ ಮಾಡೋದು, ಹಣೆಗೆ ವಿಭೂತಿ ಬಳಿದುಕೊಂಡು ಮನೆಯ ಜನವೆಲ್ಲಾ ಗಂಟೆಗಟ್ಟಲೆ ಧ್ಯಾನಕ್ಕೆ ಕೂರೋದು ಇತ್ಯಾದಿಗಳು ತೀರಾಂದ್ರೆ ತೀರಾ ಹೊಸ ವಿಚಾರಗಳಾಗಿದ್ದವು. 'ಇದೆಂತಾ ತಿಕ್ಲು ಜನುದ್ ಮನೆಗೆ ಬಂದ್ನಪ್ಪಾ, ಎತ್ತಾಗಾರ ಓಡೋಗ್ಬುಡ್ಲಾ' ಎಂದೂ ಹಲವು ಸಲ ಯೋಚಿಸುತ್ತಿದೆ. ಅವಳಿಗೆ ತಾನು ಹೊಕ್ಕ ಆ ಮನೆ ಥೇಟ್ ಶಿಸ್ತಿನ ಪಂಜರ ಅನುಸುತ್ತಿತ್ತು. ಮನೆಯ ಹಿರಿಯ ಮಗನಿಗೆ ಮದುವೆಯಾಗಿರಲಿಲ್ಲ. ಅವರು ಮೈಸೂರಿನ ರಾಮಕೃಷ್ಣ ಮಠಕ್ಕೆ ನಡೆದುಕೊಂಡು ಅಲ್ಲಿ ಮೇಸ್ತ್ರರಾಗಿದ್ದರು. ಆದರೆ ಮನೆಯ ಎಲ್ಲಾ ಕಾರುಬಾರಿನ ಹಿಡಿತ ಮಾತ್ರ ತುಸು ಮುಂಗೋಪಿಯಾದ ಅವರ ಕೈಯಲ್ಲೇ ಇತ್ತು. ಜೊತೆಗೆ ಮದುವೆಯಾಗದ ನಾದಿನಿ ಮತ್ತು ಮೈದುನರಿದ್ರು. ಇವರೆಲ್ಲರ ನಡುವೆ ಇವಳು ಹಲ್ಲುಗಳ ನಡುವಿನ ನಾಲಿಗೆಯಂತೆ ಕೆಲಸ ಮಾಡುತ್ತಾ ನಿಧಾನಕ್ಕೆ ಅವರೊಳಗೆ ಒಬ್ಬಳಾಗಿ ಹೋಗಿದ್ದು ಅಂತಹ ಸುಲಭದ ಕೆಲಸವೇನಲ್ಲ. ಇದರ ನಡುವೆಯೇ ಗಂಡ ಇವಳಿಗೆ ಅಕ್ಷರಗಳನ್ನೂ ತಿದ್ದಲು ತಾಕೀತು ಮಾಡಿದ್ದ. ಅಂತೂ ಇಂತೂ ತನ್ನ ಹೆಸರನ್ನು ಸಹಿ ಹಾಕುವ ಮಟ್ಟಿಗೆ ಕಲಿತಳು. ಅಷ್ಟು ಕಲಿಯಲು ಗಂಡನಿಂದ ಕೈಯ ಗೆಣ್ಣುಗಳ ಮೇಲೆ ತಿಂದ ವದೆಗಳಿಗೆ ಲೆಕ್ಕವಿಲ್ಲ.

ಗಂಡನ ಮನೆಯೋ ಊರಿನಿಂದ ಎರಡು ಕಿಲೋಮೀಟರ್ ದೂರದ ಬಾರೆಯ ಮೇಲಿದ್ದ ಒಂಟಿ ತೋಟದ ಮನೆ. ತವರಿನಲ್ಲಿ ಮನೆ ಮನೆ ತಿರುಗಿಕೊಂಡು, ಸಿಕ್ಕವರ ಜೊತೆಯೆಲ್ಲಾ ಇವಳ ಬಾಯಿಮರದ್ದಾಗಿದ್ದರೆಒಡೆದುಹೋಗುತ್ತಿತ್ತೇನೋ ಅನ್ನುವಷ್ಟು ಮಾತಾಡುತ್ತಿದ್ದಳು. ಇಲ್ಲಿ ನೋಡಿದರೆ ಇವಳಿಗೆ ಬೇಸರವಾದರೂ ಮಾತನಾಡಲು ಒಂದು ನರಪಿಳ್ಳೆಯೂ ಸಿಗದಂತಾಗಿತ್ತು. ಹೊಲಕ್ಕೆ ಕೆಲಸ ಮಾಡಲು ಬರುವ ಹೆಂಗಸರ ಜೊತೆ, ಇಲ್ಲವೇ ತೊರೆಹಳ್ಳಕ್ಕೆ ಬಟ್ಟೆ ಸೆಣೆಯಲು ಬರುತ್ತಿದ್ದ ಹೆಂಗಸರ ಜೊತೆ, ಇಲ್ಲವೆ ತೋಟಕ್ಕೆ ಕೂಲಿಗೆ ಬರುವವರ ಜೊತೆಯಷ್ಟೇ ಆಗಲೋ ಈಗಲೋ ನಾಕು ಮಾತಾಡಬೇಕಿತ್ತು. ಮನೆಯವರೋ ಮಾತೆತ್ತಿದರೆ ಅಧ್ಯಾತ್ಮ ಅನ್ನುತ್ತಿದ್ದರು. ಆ ವಿಷಯವಂತೂ ಇವಳ ತಲೆಯ ಮೇಲಿಂದ ಹೋಗುತ್ತಿತ್ತು. ಇನ್ನೂ ಒಂದು ಸಂಕಟವೆಂದರೆ, ಇವರ ಮನೆಯಲ್ಲಿ ಮಾಂಸವನ್ನು ತಿನ್ನುವುದಿರಲಿ, ಅದರ ವಿಷಯವನ್ನೂ ಮಾತನಾಡುವಂತಿರಲಿಲ್ಲ. ಇವಳೋ ತವರಲ್ಲಿ ಕೋಳಿ ತಿನ್ನಬೇಕು ಅನಿಸಿದರೆ ಸಾಕು, ಹೊಲದಿಂದ ಅವ್ವ ಬರುವ ಹೊತ್ತಿಗೆ ಕೈಗೆ ಸಿಕ್ಕ ಸಾಕಿದ ಕೋಳಿಯನ್ನ ಬಿಸಿನೀರಿಗೆ ಎಜ್ಜಿ ಸಾಯಿಸಿ ಇಟ್ಟಿರುತ್ತಿದ್ದಳು. ಅವ್ವ ಅನಿವಾರ್ಯವಾಗಿ ಕೋಳಿಸಾರು ಮಾಡಲೇಬೇಕಿತ್ತು. ಹಿಂಗಿದ್ದೂ ಮಾಂಸ ತಿನ್ನುವುದನ್ನೇ ಇಲ್ಲಿಗೆ ಬಂದ ಮೇಲೆ ಬಿಟ್ಟುಬಿಟ್ಟಳು. ಹೀಗೆ ಒಂದೊಂದಕ್ಕೂ ಒಂದ್ಕತಾ ಒಂದ್ಕತಾ ಬಂದ್ಲು.

ಮೈದುನ ಮತ್ತು ನಾದಿನಿಯರ ಮದುವೆಯಾಯಿತು. ಉಳಿದಿಬ್ಬರು ಓರಗಿತ್ತಿಯರು ಭಾಗ ತಗಂಡು ಊರೊಳಗಿನ ಮನೆಗೆ ಹೊರಟುಬಿಟ್ಟರು. ಇವಳು ಮಾತ್ರ ಗಂಡನ ನಿರ್ಧಾರದಂತೆ ಅತ್ತೆ–ಭಾವಂದಿರಿಂದ ಒಟ್ಟು ಕುಟುಂಬದಲ್ಲೇ ಉಳಿದಳು. ನಾದಿನಿಯ ಇಬ್ಬರು ಮಕ್ಕಳ ಬಾಣಂತನವನ್ನು ತಾನೂ ಬಾಣಂತಿಯಾಗಿದ್ದರೂ ಸಹ ಲೆಕ್ಕಿಸದೇ ಮಾಡಿದಳು. ಇಷ್ಟೇ ಅಲ್ಲ, ಇವಳ ಅಕ್ಕಂದಿರ ಮಕ್ಕಳಿಗೆ ಹೆರಿಗೆಯಾದರೆ ಅಲ್ಲೂ ಹೋಗಿ ಅವರನ್ನೂ ನೋಡುತ್ತಿದ್ದಳು. ಸಾಲದೆಂದು ನೆಂಟರಲ್ಲಿ ಯಾರೇ ಆಸ್ಪತ್ರೆಗೆ ಸೇರಲಿ, ಯಾರಿಗೇ ಯಾವುದಾದರೂ ಆಪರೇಶನ್ನಾಗಲಿ ಇವಳೇ ಅವರೆಲ್ಲರ ಸೇವೆಯನ್ನೂ ಮಾಡುತ್ತಿದ್ದಳು.

ಗಂಡನಿಗೆ ಮಕ್ಕಳೆಂದರೆ ಬಲು ಇಷ್ಟ. 'ಏಸಾರ ಮಕ್ಳು ಉಟ್ಲಿ, ಒಂದೆಕ್ರೆ ಜಾಗಕ್ಕೆ ಬೇಲಿ ಹಾಕ್ಸಿ ತದ್ಲು ಕಟ್ಟಿ ಅದ್ರೊಳಿಕ್ ಬುಟ್ರೆ ಆಡ್ಕಂಡ್ ಬೆಳ್ಕತವೆ ಕಣೇ ಗಂಗ್ಮಾಳಿ, ನೀ ಹೆರದಷ್ಟೇ ಕೆಲ್ಸ ನೋಡು' ಅಂತಿದ್ನಂತೆ. ಮೊದಲ ಮಗು ಹೆಣ್ಣು, ಬಾಣಂತನವೂ ಇಲ್ಲೇ, ಅಲ್ಲೆಲ್ಲ ಆಸ್ಪತ್ರೆ ಇಲ್ಲ ಅಂತ. ತವರಿಗೂ ಕಳಿಸಲಿಲ್ಲ. ಅವಳಿಗೆ ನಾಕು ವರ್ಷ ಆದೇಟ್ಕೆ ಮೈಸೂರಿಗೆ ದೊಡ್ಡಪ್ಪನ ಬಳಿ ಚೆನ್ನಾಗಿ ಓದಲಿ ಎಂದು ಕಳಿಸಿಬಿಟ್ಟರು. ಇಷ್ಟರ ನಡುವೆ ಇನ್ನೊಂದು ಮಗು ಹೃದಯದಲ್ಲಿ ರಂಧ್ರ ಇಟ್ಟುಕೊಂಡು ಹುಟ್ಟಿತ್ತು. ಅದರ ಸೇವೆಯನ್ನೂ ಮಾಡಿದಳು. ಆದರೆ ಅದನ್ನು ಉಳಿಸಿಕೊಳ್ಳಲಾಗದೆ ಕೊರಗಿ, ನಂತರ ಮತ್ತೂ ಎರಡು ಮಕ್ಕಳನ್ನು ಹೆತ್ತಳು. ನಮ್ಮ ಬಯಲು ಸೀಮೆ ಗಂಡಸರು ವ್ಯವಹಾರದಲ್ಲಿ ಬಲು ಮುಂದೆ, ಆದರೆ ಸಂಬಂಧಗಳನ್ನು ನಿಭಾಯಿಸುವ ಕೆಲಸವನ್ನು ಮಾತ್ರ ಹೆಂಗಸರ ಕೊರಳಿಗೆ ಕಟ್ಟಿ ನಿಸೂರಾಗಿ ಇದ್ದುಬಿಡುವ ಜಾಯಮಾನದವರು. ಹಂಗಾಗಿ ಯಾವುದೇ ಮದುವೆಯಾದರೂ, ತಿಥಿಯಾದರೂ ಇವಳೇ ಹೋಗಬೇಕಿತ್ತು. ನೆಂಟರಲ್ಲೂ ಗಂಗಮಾಳಿ ಬಂದಳೆಂದರೆ ಅರ್ಧ ಕೆಲಸ ಮುಗಿದಂಗೇ ಅನ್ನೋ ಭಾವ. ದೇವರ ಕಾರ್ಯ ಬಂದರೆ, ಐನೋರಿಗೆ ಬೇಕಾದ್ದನ್ನು ಒದಗಿಸಲು ಇವಳದೇ ಮುಂದಾಳತ್ವ. ಕಾಳಿಕಟ್ಟಮ್ಮನ ಪರದಲ್ಲಂತೂ ಅರುಷ್ಣುದ್ ಸೀರೆ ಉಟ್ಟು, ಬೇವಿನಸೊಪ್ಪು ಕೈಯಲ್ಲಿಡಿದು ಕುಂತಳೆಂದರೆ ದೇವಿಯನ್ನೇ ಪ್ರತಿಷ್ಠಾಪನೆ ಮಾಡ್ದಂಗಿರ್ತಿತ್ತು. ಮದುವೆಗಳಾದರೆ ಕಳಸ ಹಿಡಿಯೋದು, ಅಸೆ ಹಚ್ಚದು, ಅಕ್ಸತೆ ಅಂಗ್ನೂಲು ಮಾಡದು ಇವಳೇ. ಸಾವಾದರಂತೂ ಸತ್ತವರ ಮನೆಯವರನ್ನ ಬಾಚಿ ತಬ್ಬಿ ಸಂತೈಸಿ ತಾನೂ ಬೋರೆಂದು ಅತ್ತು, ಮಣ್ಣಿಗೆ ಉಂಡೆ ಕಟ್ಟುವ ವರೆಗೆ ಇವಳದೇ ಪಾರುಪತ್ಯ.

